**1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ**

**Spl.C.181/2017**

ದಿನಾಂಕ 08.01.2026
(ಸಾಕ್ಷಿಗೆ ಪ್ರಮಾಣವಚನವನ್ನು ಬೋಧಿಸಲಾಯಿತು)

ಚಾಸಾ - 13 ಪ್ರಾಸಾ - 15

| | | |
|---|---|---|
| ಹೆಸರು | ಃ | ಗೋಪಾಲ್ |
| ತಂದೆಯ ಹೆಸರು | ಃ | ಲೇಟ್ ಕೃಷ್ಣಪ್ಪ |
| ವಯಸ್ಸು | ಃ | 39 ವರ್ಷ |
| ಉದ್ಯೋಗ | ಃ | ವ್ಯಾಪಾರ |
| ವಾಸಸ್ಥಳ | ಃ | ಮಾಗಡಿ ಟೌನ್ |

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

ಪ್ರಾಸಾ 2 ಮೂರ್ತಿ ಹಾಗು ಚಾಸಾ 8 ವೀರನರಸಯ್ಯ ನನಗೆ ಗೊತ್ತು. ಮೃತ ಹೇಮಂತ್ ಕುಮಾರ್ ಸಹ ನನಗೆ ಗೊತ್ತು. 2ನೇ ಆರೋಪಿ ರಾಜೇಶ್ವರಿ ನನಗೆ ಗೊತ್ತು. 1ನೇ ಆರೋಪಿ ಸಿದ್ದರಾಜು ನೋಡಿ ಪರಿಚಯವಿದೆ. 3ನೇ ಆರೋಪಿ ನನಗೆ ಗೊತ್ತಿಲ್ಲ. 2ನೇ ಆರೋಪಿ ರಾಜೇಶ್ವರಿ ಮೃತ ಹೇಮಂತ್ ಕುಮಾರನ ಹೆಂಡತಿ. ಮೃತ ಹೇಮಂತ್ ಕುಮಾರ್ ಮತ್ತು ರಾಜೇಶ್ವರಿ ಯಾವಾಗಲೂ ಜಗಳವಾಡುತ್ತಿದ್ದು, ಈ ವಿಚಾರ ನಮ್ಮ ಊರಿನವರಿಗೆಲ್ಲಾ ತಿಳಿದಿತ್ತು. ಅವರಿಬ್ಬರು ಪ್ರೀತಿ ಮಾಡಿ ಮದುವೆಯಾಗಿದ್ದರು. ಸ್ವಲ್ಪ ಸಮಯ 2ನೇ ಆರೋಪಿ ಹೇಮಂತ್ ಕುಮಾರನನ್ನು ಬಿಟ್ಟು ಹೋಗಿದ್ದು, ಮತ್ತೆ ಪುನಃ ಬಂದು ಆತನೊಂದಿಗೆ ವಾಸ ಮಾಡುತ್ತಿದ್ದಳು.

2. ದಿನಾಂಕ 29.08.2017 ರಲ್ಲಿ ತಾವರೆಕೆರೆ ಪೊಲೀಸ್ ಠಾಣೆಯ ಹೋಮ್ ಗಾರ್ಡ್ ಪ್ರಾಸಾ 8 ನನ್ನ ಮೊಬೈಲ್ ಗೆ ಫೋನ್ ಕರೆ ಮಾಡಿ ಇಲ್ಲಿ ಒಬ್ಬ ವ್ಯಕ್ತಿಯ ಕೊಲೆಯಾಗಿರುತ್ತದೆ, ಈತ ನಿಮ್ಮ ಏರಿಯಾದವನಂತೆ ಕಾಣುತ್ತದೆ ಬಂದು ಆತನ ಗುರುತು

ಹಚ್ಚಿ ಎಂದು ತಿಳಿಸಿದರು. ಆಗ ನಾನು, ವೀರನರಸಯ್ಯ ಮತ್ತು ಎಸ್ ಮೂರ್ತಿ ಅವರು ರಾತ್ರಿ 8.30 ರ ಸಮಯದಲ್ಲಿ ತಿಪ್ಪಗೊಂಡನಹಳ್ಳಿ ಡ್ಯಾಂ ಎದುರುಗಡೆ ಇರುವ ಗುಡ್ಡೆಯ ಮೇಲೆ ಹೋದೆವು. ಅಲ್ಲಿ ಒಂದು ಶವವಿತ್ತು. ಸದರಿ ಶವವನ್ನು ನೋಡಿ ಅದು ಹೇಮಂತ್ ಕುಮಾರನ ಶವ ಎಂದು ಗುರುತಿಸಿದೆವು. ಸದರಿ ಮೃತ ದೇಹವನ್ನು ನೋಡುವಾಗ ಕೊಲೆ ಆದಂತೆ ಕಂಡುಬಂದಿದ್ದು, ಆತನ ಮುಖದ ಮೇಲೆ ಮತ್ತು ದೇಹದ ಮೇಲೆಲ್ಲಾ ಗಾಯಗಳಾಗಿದ್ದವು. ಎಸ್.ಮೂರ್ತಿ ರವರು ಇದು ಹೇಮಂತ್ ಕುಮಾರನ ಮೃತ ದೇಹ ಎಂದು ಗುರುತು ಹಚ್ಚಿದ್ದು ಆತನಿಂದ ಪೊಲೀಸರು ದೂರು ಪಡೆದಿರುತ್ತಾರೆ.

3. ಪೊಲೀಸರು ಸ್ಥಳದಲ್ಲಿ ನಮ್ಮನ್ನು ಯಾರ ಮೇಲಾದರೂ ಅನುಮಾನ ಇದೆಯಾ ಎಂದು ಕೇಳಿದಾಗ ಎಸ್.ಮೂರ್ತಿ ರವರು ಹೇಮಂತ್ ಕುಮಾರನ ಹೆಂಡತಿಯ ಮೇಲೆ ಅನುಮಾನ ಇದೆ ಎಂದು ಹೇಳಿದರು. ಸಿದ್ದರಾಜು ಮತ್ತು ರಾಜೇಶ್ವರಿ ಹೇಮಂತ್ ನನ್ನು ಕರೆದುಕೊಂಡು ಹೋಗಿ ಕೊಲೆ ಮಾಡಿರುತ್ತಾರೆ ಎಂದು ನಂತರ ತಿಳಿಯಿತು.

**ಪಾಟೀ ಸವಾಲುಃ ಶ್ರೀ.ಟಿ.ಜಿ., ವಕೀಲರಿಂದ 2ನೇ ಆರೋಪಿ ಪರವಾಗಿಃ**

4. ನಾನು ಮಾಗಡಿಯ ನಿವಾಸಿ ಎಂದರೆ ಸರಿ. ಮೃತ ವ್ಯಕ್ತಿ ನಮ್ಮ ಏರಿಯಾದವನೇ ಎಂದರೆ ಸರಿ. ನಮ್ಮ ಏರಿಯಾದ ಹೆಸರು ಶ್ರೀ ಬಾಬು ಜಗಜೀವನ್ ರಾವ್ ನಗರ. ನಮ್ಮ ಏರಿಯಾದಲ್ಲಿ ಸುಮಾರು 60 ಮನೆಗಳಿವೆ. ಮೃತ ಹೇಮಂತ್ ಕುಮಾರ್ ಅತಿಯಾಗಿ ಮದ್ಯಪಾನ ಮಾಡುತ್ತಿದ್ದ ಎಂದರೆ ಸರಿ. ಆತ ಮನೆಗೆ ಏನೂ ತಂದು ಹಾಕುತ್ತಿರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ಮೃತ ಹೇಮಂತ್ ಕುಮಾರ್ ನನ್ನ ಸಂಬಂಧಿ ಎಂದರೆ ಸರಿಯಲ್ಲ. ನಾವಿಬ್ಬರು ಒಂದೇ ಜಾತಿಯವರು ಎಂದರೆ ಸರಿ. ಎಸ್.ಮೂರ್ತಿ ಮತ್ತು ವೀರನರಸಯ್ಯ ನನ್ನ ಪರಿಚಯಸ್ಥರು ಎಂದರೆ ಸರಿ. ಎಸ್.ಮೂರ್ತಿ ರವರು ಹೇಮಂತ್ ಕುಮಾರನ ಸಂಬಂಧಿ

ಎಂದರೆ ಸರಿ. ಸಾಕ್ಷಿ ಸ್ವಯಂ ಹೇಳುತ್ತಾರೆ ಅಕ್ಕನ ಗಂಡನಾಗಿರುತ್ತಾನೆ. ಮೃತ ಹೇಮಂತ ದುಡಿಮೆ ಮಾಡಿಕೊಂಡು ಬಂದ ಹಣವನ್ನು ಸಂಪೂರ್ಣ ಖಾಲಿಯಾಗುವಷ್ಟು ಮದ್ಯಪಾನ ಮಾಡುತ್ತಿದ್ದ ಎಂದರೆ ಸರಿಯಲ್ಲ.

5. ಆತನ ಹೆಂಡತಿ ಸಹ ಕೆಲಸಕ್ಕೆ ಹೋಗುತ್ತಿದ್ದಳು ಎಂದರೆ ಸರಿ. ಆಕೆ ದುಡಿದು ತಂದ ಹಣವನ್ನು ಸಹ ಕಿತ್ತುಕೊಂಡು ಅದನ್ನು ಸಹ ತನ್ನ ಕುಡಿತಕ್ಕೆ ಉಪಯೋಗಿಸುತ್ತಿದ್ದು, ಆ ಕಾರಣ ಅವರ ನಡುವೆ ಗಲಾಟೆಯಾಗುತ್ತಿತ್ತು ಎಂದರೆ ನನಗೆ ಗೊತ್ತಿಲ್ಲ. ಈ ವಿಚಾರಕ್ಕೆ ಆಕೆ ಮನ ನೊಂದು ಘಟನೆಗಿಂತ ಒಂದೂವರೆ ವರ್ಷಕ್ಕಿಂತ ಮೊದಲೇ ಮನೆ ಬಿಟ್ಟು ಹೋಗಿ ತನ್ನ ಅಕ್ಕನ ಮನೆಯಲ್ಲಿ ವಾಸವಿದ್ದಳು ಎಂದರೆ ಸಾಕ್ಷಿ ಮನೆ ಬಿಟ್ಟು ಹೋಗಿದ್ದಳು ಆದರೆ ಮತ್ತೆ ಪುನಃ ಬಂದಿದ್ದಳು ಎಂದು ಉತ್ತರಿಸಿರುತ್ತಾರೆ. ಆಕೆ ಯಾವಾಗ ಮನೆ ಬಿಟ್ಟು ಹೋದಳು ಹಾಗು ಮತ್ತೆ ಯಾವತ್ತು ವಾಪಸ್ಸು ಬಂದಳು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ.

6. ಆರೋಪಿ ಸಂಖ್ಯೆ 2 ಘಟನೆಗಿಂತ ಒಂದೂವರೆ ವರ್ಷಗಳ ಹಿಂದೆಯೇ ಹೇಮಂತ್ ಕುಮಾರನ ಜೊತೆ ಜೀವನ ನಡೆಸಲು ಸಾಧ್ಯವಿಲ್ಲ ಎಂದು ಮನೆ ಬಿಟ್ಟು ಹೋಗಿದ್ದರೂ ಸಹ ಈಗ ನಾನು ಎಸ್.ಮೂರ್ತಿ ಮತ್ತು ಪೊಲೀಸರ ಮಾತು ಕೇಳಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೃತ ಹೇಮಂತ್ ಕುಮಾರ ಮದ್ಯಪಾನ ವ್ಯಸನಿಯಾಗಿರುವ ಕಾರಣ ಎಲ್ಲರ ಬಳಿಯೂ ಹಣ ಪಡೆದುಕೊಂಡು ಕುಡಿದು, ಎಲ್ಲಿ ಬೇಕೆಂದಲ್ಲಿ ಮಲಗಿ, ಅದೇ ರೀತಿ ಜೀವನ ನಡೆಸುತ್ತಿದ್ದ ಎಂದರೆ ಸರಿಯಲ್ಲ.

7. ನನಗೆ ತಾವರೆಕೆರೆ ಪೊಲೀಸ್ ಠಾಣೆಯ ಪೊಲೀಸರು ಎಲ್ಲಾ ಪರಿಚಯ ಎಂದರೆ ಸರಿಯಲ್ಲ. ನಾವು ಸ್ಥಳಕ್ಕೆ ಹೋಗಿದ್ದೆವು ಎಂದು ಹೇಳುವ ಸಮಯದಲ್ಲಿ ಸಂಪೂರ್ಣ ಕತ್ತಲೆಯಾಗಿತ್ತು ಎಂದರೆ ಸರಿ. ತಿಪ್ಪಗೊಂಡನಹಳ್ಳಿ ಡ್ಯಾಂ ಎದುರುಗಡೆ ಇರುವ ಗುಡ್ಡೆಯನ್ನು

ಬೆಳಕು ಇರುವ ವೇಳೆಯಲ್ಲಿಯೂ ಸಹ ಹತ್ತಬೇಕಾದರೆ ನಿಧಾನವಾಗಿ ಹೋಗಬೇಕು ಇಲ್ಲದೇ ಇದ್ದರೇ ಜಾರಿ ಬೀಳುವ ಸಾಧ್ಯತೆ ಇರುತ್ತದೆ ಎಂದರೆ ಸರಿ. ಕತ್ತಲೆಯಲ್ಲಿ ಮೃತನ ದೇಹದ ಯಾವ ಯಾವ ಭಾಗದಲ್ಲಿ ಗಾಯಗಳಾಗಿದ್ದವು ಎಂದು ನಮಗೆ ಕಾಣಿಸಲಿಲ್ಲ, ಪೊಲೀಸರು ಹೇಳಿದರು ಎಂದರೆ ಸರಿಯಲ್ಲ. ಮೃತ ದೇಹ ದ ಬಳಿ ಹೋಗುವ ಸಮಯದಲ್ಲಿಯೂ ಸಹ ಮದ್ಯಪಾನದ ವಾಸನೆ ಬರುತ್ತಿತ್ತು ಎಂದರೆ ಸಾಕ್ಷಿ ನನಗೆ ಅದು ಗೊತ್ತಾಗಲಿಲ್ಲ ಎಂದು ಉತ್ತರಿಸಿರುತ್ತಾರೆ. ಅಲ್ಲಿದ್ದ ಪೊಲೀಸರೆಲ್ಲಾ ಆತ ಕುಡಿದು ಜಾರಿಬಿದ್ದು ಏಟಾಗಿದೆ ಎಂದು ಮಾತನಾಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ಮೃತ ಹೇಮಂತ್ ಕುಮಾರನ ಬಾವ ಎಸ್.ಮೂರ್ತಿ ಇವರ ಮಾತು ಕೇಳಿ ಆತನ ಹೆಂಡತಿ ಮನೆ ಬಿಟ್ಟು ಹೋಗಿರುತ್ತಾಳೆ, ಆಕೆಗೆ ಒಂದು ಬುದ್ಧಿ ಕಲಿಸಬೇಕು ಎಂಬ ಕಾರಣದಿಂದ ನಮ್ಮನ್ನು ಶಾಮೀಲ್ ಮಾಡಿಕೊಂಡು ಸುಳ್ಳು ದೂರು ನೀಡಲಾಗಿದೆ ಎಂದರೆ ಸರಿಯಲ್ಲ. ಆತ ಕುಡಿದು ಬಿದ್ದು ಮೃತನಾಗಿರುತ್ತಾನೆ ಎಂಬ ವಿಚಾರ ನನಗೆ ತಿಳಿದಿದ್ದರೂ ಸಹ ಆತನ ಬಾವನ ಮಾತು ಕೇಳಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ಮೃತ ಹೇಮಂತ ನಮ್ಮ ಗ್ರಾಮದವನಾಗಿದ್ದು, ಆ ಕಾರಣ 2ನೇ ಆರೋಪಿ ಆತನ ಹೆಂಡತಿ ಎಂದು ನನಗೆ ಗೊತ್ತು ಎಂದರೆ ಸರಿ.

**<u>ವಾಟೀ ಸವಾಲುಃ 1ನೇ ಮತ್ತು 3ನೇ ಆರೋಪಿ ಪರ ವಕೀಲರಿಂದಃ 2ನೇ ಆರೋಪಿ ಪರವಾಗಿ ಮಾಡಿರುವ ವಾಟೀಸವಾಲನ್ನು ಅಳವಡಿಸಿಕೊಳ್ಳಲು ಕೋರಿದ್ದು, ಅನುಮತಿಸಲಾಗಿದೆ.</u>**

ಮರುವಿಚಾರಣೆಃ ಇಲ್ಲ.
(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

**ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ**

**(ಪಂಚಾಕ್ಷರಿ.ಎಂ.)**
**1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು/**
**ವಿಶೇಷ ನ್ಯಾಯಾಧೀಶರು,**
**ರಾಮನಗರ.**